

## 3ಡಿ ತಂತ್ರಜ್ಞಾನ ವರದಾನ

# ಬೆನ್ನುಮೂಳೆ ಸರ್ಜರಿ

ಬೆನ್ನುಮೂಳೆ ಸರ್ಜರಿ ಇದೀಗ ಸರಳ. ವಿನೂತನ 3ಡಿ ತಂತ್ರಜ್ಞಾನ ಯಮಯಾತನೆಯ ಸರ್ಜರಿಯಿಂದ ಮುಕ್ತಿ ದೊರಕಿಸಿದೆ. ಸರ್ಜರಿ ಮಾಡಿಸಿಕೊಂಡ ರೋಗಿ ಕೇವಲ ಎರಡೇ ದಿನಗಳಲ್ಲಿ ಮನೆಗೆ ಮರಳಿ ವಾರದೊಳಗೆ ಕರ್ತವ್ಯಕ್ಕೆ ಹಾಜರಾಗಬಹುದು.

■ **ಉಮಾ ಅನಂತ್**

ಇಪ್ಪತ್ತೈದು ವರ್ಷದ ವಸಂತ್‌ಗೆ ಎರಡೂ ಕೈಗಳಲ್ಲಿ ಅಸಾಧ್ಯ ನೋವು ಜೊತೆಗೆ ನಡುಕ. ದಿನದಿಂದ ದಿನಕ್ಕೆ ಇದು ಹೆಚ್ಚುತ್ತಾ ಹೋಗಿ ನಿಶ್ಯಕ್ತಿಯೂ ಬಂದು ಕೈಗಳಲ್ಲಿ ಯಾವ ಕೆಲಸವನ್ನೂ ಮಾಡಲಾಗದ ಪರಿಸ್ಥಿತಿ. ಆಸ್ಪತ್ರೆಗೆ ಹೋದ ವಸಂತನ ಪರೀಕ್ಷೆ ಮಾಡಿದ ವೈದ್ಯರು ಎಂಆರ್‌ಐ ಸ್ಕ್ಯಾನ್ ಮಾಡಿಸಿದಾಗ ಈತನ ಬೆನ್ನುಮೂಳೆಯ ಒಳಭಾಗದಲ್ಲಿ ಟ್ಯೂಮರ್ ಇರುವುದು ಕಂಡುಬಂತು. ‘ಇಂಟ್ರಾ ಮೆಡುಲರಿ ಟ್ಯೂಮರ್’ ಎಂದು ಕರೆಯಲಾಗುವ ಈ ಟ್ಯೂಮರ್‌ನಿಂದಾಗಿ ವಸಂತ್ ಸಂಪೂರ್ಣವಾಗಿ ಕುಗ್ಗಿಹೋಗಿದ್ದ.

ಇದಕ್ಕೆ ಶಸ್ತ್ರಚಿಕಿತ್ಸೆ ಒಂದೇ ದಾರಿ ಆಗಿದ್ದು, ಬೆಂಗಳೂರಿನ ರಾಜಾಜಿನಗರದಲ್ಲಿರುವ ಬಿಆರ್ ಲೈಫ್ ಎಸ್‌ಎಸ್‌ಎನ್‌ಎಂಸಿ ಆಸ್ಪತ್ರೆಗೆ ದಾಖಲಾದ ವಸಂತ್. ಈತನ ಬೆನ್ನುಮೂಳೆಗೆ ಸಿ–ಆರ್ಮ್ ಮೂಲಕ ಇಂಟ್ರಾಆಪರೇಟಿವ್ ಎಕ್ಸ್–ರೇ ಇಮೇಂಜಿಂಗ್ ತಂತ್ರಜ್ಞಾನ ಬಳಸಿ ಸರ್ಜರಿ ಮಾಡಲಾಯಿತು. ಈ ತ್ರಿಡಿ ಇಮೇಜ್ ತಂತ್ರಜ್ಞಾನದಿಂದಾಗಿ ಬೆನ್ನುಮೂಳೆಯ ಒಳಗೆ ಬಂಧಿಯಾದ ಟ್ಯೂಮರ್ ಯಾವ ಭಾಗದಲ್ಲಿದೆ ಎಂಬುದನ್ನು ನಿಖರವಾಗಿ ಪತ್ತೆ ಹಚ್ಚಲು ಸಾಧ್ಯವಾಯಿತು. ಎರಡೇ ದಿನಗಳಲ್ಲಿ ವಸಂತ್ ಮನೆಗೆ ಮರಳಿ ದೈನಂದಿನ ಚಟುವಟಿಕೆಗಳಲ್ಲಿ ನಿರಾತಂಕವಾಗಿ ತೊಡಗಿಕೊಳ್ಳುವಂತಾಯಿತು.

ಹಲವು ಕಾರಣಗಳಿಗೆ ಬರುವ ತೀವ್ರವಾದ ಬೆನ್ನುನೋವು, ಅಪಘಾತಗಳಿಂದ ಬೆನ್ನಿಗೆ ಏಟು ಬಿದ್ದಾಗ ಉಂಟಾಗುವ ನೋವು, ಮೂಳೆ ಮುರಿತ, ಕುಳಿತೇ ಕೆಲಸ ಮಾಡುವವರಲ್ಲಿ ಬರುವ ಬೆನ್ನುನೋವು... ಹೀಗೆ ನಾನಾ ಕಾರಣಗಳಿಗಾಗಿ ಬರುವ ಬೆನ್ನುನೋವಿಗಾಗಿ ವ್ಯಕ್ತಿ ಸರ್ಜರಿಯ ಮೊರೆ ಹೋಗಲೇ ಬೇಕಾಗುತ್ತದೆ. ಸರ್ಜರಿಯಿಂದ ಉಂಟಾಗುವ ವಿಪರೀತ ನೋವು, ವಾರಗಟ್ಟಲೆ ಆಸ್ಪತ್ರೆ ವಾಸ, ಆ್ಯಂಟಿಬಯಾಟಿಕ್, ಔಷಧಿಗಳ ಸೇವನೆ ಮುಂತಾದ ಹಲವು ಯಾತನೆಗಳಿಂದ ಇದುವರೆಗೆ ಜನ ಬವಣೆ ಪಡಬೇಕಾಗಿತ್ತು. ಆದರೆ ಇದೀಗ ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿಗೆ